

# ಜೆಫ್ ಬಿಜೋಸ್‌ಗೆ ಜೀವಭಯ!

ಪ್ರಪಂಚದ 'ನಂಬರ್ ಒನ್ ಶ್ರೀಮಂತ' ಅಂದ ಮೇಲೆ ಜೀವ ಬೆದರಿಕೆಯ ಭಯ ಇರುವುದು ಸಹಜವೇ. ಅಮೆಜಾನ್ ಕಂಪನಿಯ ಒಡೆಯ ಜೆಫ್ ಬಿಜೋಸ್‌ಗೆ ಕೂಡಾ ಈ ಭಯ ಇದ್ದಂತಿದೆ. ಹಾಗೆಂದೇ ಸಿಯಾಟಲ್‌ನಲ್ಲಿರುವ ಅಮೆಜಾನ್ ಕೇಂದ್ರ ಕಚೇರಿಯಲ್ಲಿ ಆತನ ಸಿಇಓ ಚೇಂಬರ್‌ಗೆ ಭಾರೀ ಭದ್ರತೆ ಕಲ್ಪಿಸಲಾಗಿದೆ. ಇತ್ತೀಚೆಗೆ ಚೇಂಬರ್ ಸುತ್ತ ಬುಲೆಟ್‌ಪ್ರೂಫ್ ಪ್ಯಾನೆಲ್ ಅಳವಡಿಸಲು 1.80 ಲಕ್ಷ ಡಾಲರ್ ಖರ್ಚು ಮಾಡಲಾಗಿದೆ. ಬಾಹ್ಯ ಬೆದರಿಕೆಯಿಂದ ಬಿಜೋಸ್‌ನನ್ನು ರಕ್ಷಿಸಲು ಕಂಪನಿಯು ವರ್ಷಕ್ಕೆ 1 ಲಕ್ಷ ಡಾಲರ್‌ಅನ್ನು ಪ್ರತ್ಯೇಕವಾಗಿ ವೆಚ್ಚ ಮಾಡುತ್ತಿದೆ. ಹಾಗೆಂದು ಬಿಜೋಸ್ ತನಗೆ ಜೀವಭಯ ಇದೆಯೆಂದು ಪೊಲೀಸರಿಗೇನೂ ದೂರು ಕೊಟ್ಟಿಲ್ಲ. ಅಂತಹ ಯಾವುದೇ ಘಟನೆಗಳಾದರೆ ಎದುರಿಸಲು ಇದು ಮುನ್ನೆಚ್ಚರಿಕೆ ಅಷ್ಟೆ.

2019ರಲ್ಲಿ ಜೆಫ್ ಬಿಜೋಸ್‌ನ ನಿವ್ವಳ ಆಸ್ತಿ ಮೌಲ್ಯ ಸುಮಾರು 15,810 ಕೋಟಿ ಅಮೆರಿಕನ್ ಡಾಲರ್. ಈ ವರ್ಷದ ಫೋರ್ಬ್ಸ್ ಶ್ರೀಮಂತರ ಪಟ್ಟಿಯಲ್ಲಿ ಮೈಕ್ರೊಸಾಫ್ಟ್‌ನ ಬಿಲ್ ಗೇಟ್ಸ್‌ಅನ್ನು ಎರಡನೇ ಸ್ಥಾನಕ್ಕೆ ತಳ್ಳಿ, ಜೆಫ್, ಜಗತ್ತಿನ 'ನಂಬರ್ ಒನ್ ಶ್ರೀಮಂತ'ನ ಪಟ್ಟಕ್ಕೇರಿದ್ದಾನೆ. ಇತ್ತೀಚೆಗೆ ಪತ್ನಿ ಮೆಕೆಂಜೀ ಬಿಜೋಸ್‌ಗೆ ಡೈವೋರ್ಸ್ ಕೊಟ್ಟ ಬಳಿಕ ಭಾರೀ ಮೊತ್ತದ ಪರಿಹಾರ ಹಣವನ್ನು ನೀಡಿದರೂ ಜೆಫ್‌ನ ಶ್ರೀಮಂತಿಕೆ ಅಷ್ಟೇನೂ ಕರಗಿಲ್ಲ. ಇತರ ಸೊತ್ತುಗಳ ಜೊತೆಗೆ ಅಮೆಜಾನ್ ಕಂಪನಿಯ ಶೇಕಡಾ 25ರಷ್ಟು ಷೇರುಗಳನ್ನೂ ಜೆಫ್, ಪತ್ನಿಗೆ ವರ್ಗಾಯಿಸಿದ್ದಾನೆ. ಆ ಮೂಲಕ ಆಕೆಯೀಗ ಜಗತ್ತಿನ ಮೂರನೇ ಅತ್ಯಂತ ಶ್ರೀಮಂತ ಮಹಿಳೆಯಾಗಿದ್ದಾಳೆ.

ಸದ್ಯಕ್ಕಂತೂ ಶ್ರೀಮಂತಿಕೆಯಲ್ಲಿ ಜೆಫ್‌ನನ್ನು ಹಿಂದಿಕ್ಕಲು ಯಾರಿಗೂ ಸಾಧ್ಯವಿಲ್ಲ. ಜೆಫ್‌ನ ನಿವ್ವಳ ಆಸ್ತಿ ಮೌಲ್ಯ ಎರಡನೇ ಸ್ಥಾನದಲ್ಲಿರುವ ಬಿಲ್ ಗೇಟ್ಸ್ ಆಸ್ತಿಗಿಂತ 16 ಶತಕೋಟಿ ಡಾಲರ್‌ನಷ್ಟು ಹೆಚ್ಚು. ಕಳೆದ 20 ವರ್ಷಗಳಿಂದ ಜೆಫ್‌ನ ಹೆಸರು ನಿರಂತರವಾಗಿ ಫೋರ್ಬ್ಸ್ ಶತಕೋಟಿಪತಿಗಳ ಪಟ್ಟಿಯಲ್ಲಿದೆ. ಈಗ ಪ್ರತಿ ಸೆಕೆಂಡಿಗೆ ಜೆಫ್‌ನ ಆದಾಯ 2,489 ಡಾಲರ್. ಇದು ಅಮೆರಿಕದ ಸಾಮಾನ್ಯ ನೌಕರನೊಬ್ಬನ ಒಂದು ವಾರದ ಸಂಬಳಕ್ಕೆ ಸಮ!

ಜಗತ್ತಿನ ದೈತ್ಯ ಕಂಪನಿಗಳಲ್ಲಿ ಒಂದಾದ ಉಬರ್ ಶೀಘ್ರವೇ ಷೇರುಪೇಟೆಯನ್ನು ಪ್ರವೇಶಿಸಲಿದೆ. ಆರಂಭದ ಹಂತದಿಂದಲೇ ಉಬರ್‌ನಲ್ಲಿ ಬಂಡವಾಳ ಹೂಡಿರುವ ಶ್ರೀಮಂತರಿಗೆ ಇದು ಭಾರೀ ಲಾಭ ತಂದುಕೊಡಲಿದೆ. ಈ ಹೂಡಿಕೆದಾರರ ಗುಂಪಿನಲ್ಲಿ ಜೆಫ್ ಕೂಡಾ ಇದ್ದಾನೆ. ಆಗ ಆತ ಹೂಡಿದ್ದು 30 ಲಕ್ಷ ಡಾಲರ್. ಉಬರ್ ಷೇರುಪೇಟೆ ಪ್ರವೇಶದಿಂದಾಗಿ ಈ ಮೊತ್ತ 400 ದಶಲಕ್ಷ ಡಾಲರ್‌ಗೆ ಏರಲಿದೆ! ಹಾಗಾಗಿ ಈತನ 'ನಂಬರ್ ಒನ್' ಪಟ್ಟ ಅಬಾಧಿತ ಎನ್ನಲಾಗುತ್ತಿದೆ.

ಈ ಮಧ್ಯೆ ಅಮೆರಿಕನ್ ಮೀಡಿಯಾ ಇನ್‌ಕಾರ್ಪೊರೇಟೆಡ್ (ಎಎಮ್‌ಐ) ಮಾಧ್ಯಮ ಗುಂಪಿನ ಜೊತೆಗೆ ಜೆಫ್‌ನ ಜಟಾಪಟಿಯೂ ಮುಂದುವರಿದಿದೆ. ಎಎಮ್‌ಐನ 'ನ್ಯಾಷನಲ್ ಎನ್‌ಕ್ವೈರರ್' ಟ್ಯಾಬ್ಲಾಯ್ಡ್‌ನಲ್ಲಿ ಶೀಘ್ರವೇ ಜೆಫ್‌ನ ಬೆತ್ತಲೆ ಫೋಟೊಗಳು ಪ್ರಕಟವಾದರೂ ಅಚ್ಚರಿಯಿಲ್ಲ ಎಂದು ಜೆಫ್‌ನ ಖಾಸಗಿ ತನಿಖಾ ಸಂಸ್ಥೆಯ ಅಧಿಕಾರಿಯೊಬ್ಬ ಬಹಿರಂಗ ಪಡಿಸಿದ್ದಾನೆ. 'ಜೆಫ್ ಚಾರಿತ್ರ್ಯಹನನದ ಯತ್ನ ಹಿಂದಿನಿಂದಲೂ ನಡೆದಿದೆ. ಜೊತೆಗೆ ಹಣಕ್ಕಾಗಿ ಆತನನ್ನು ಬ್ಲ್ಯಾಕ್‌ಮೇಲ್ ಮಾಡಲು ಯತ್ನಿಸಿದ್ದಾರೆ. ಆತ ಬ್ಲ್ಯಾಕ್‌ಮೇಲ್‌ಗೆ ಬಗ್ಗಿಲ್ಲ. ಇದರ ಪರಿಣಾಮವಾಗಿ ನಗ್ನ ಫೋಟೊಗಳು ಪ್ರಕಟವಾಗಲೂಬಹುದು' ಎಂಬ ಆ ಅಧಿಕಾರಿಯ ಹೇಳಿಕೆ ದೊಡ್ಡ ವಿವಾದವಾಗಿದೆ. ಈ ಹಿಂದೆ ಜೆಫ್ ಮತ್ತು ಟೀವಿ ತಾರೆ ಲಾರೆನ್ ಸ್ಯಾಂಚೆಜ್ ನಡುವಣ ಪ್ರಣಯದ ಚಿತ್ರಗಳು, ವೈಯಕ್ತಿಕ ಮೇಲ್ ವಿವರಗಳು ಪತ್ರಿಕೆಯೊಂದರಲ್ಲಿ ಬಹಿರಂಗಗೊಂಡು ಜೆಫ್‌ನ ಮದುವೆ ಮುರಿಯುವುದಕ್ಕೆ ಕಾರಣವಾಗಿದ್ದು ಜನರ ಮನಸ್ಸಿನಿಂದ ಇನ್ನೂ ಅಳಿಸಿಹೋಗಿಲ್ಲ.

ಈ ನಗ್ನ ಫೋಟೊಗಳು ಮತ್ತು ಹಲವು ಇಮೇಲ್ ದಾಖಲೆಗಳನ್ನು ಜೆಫ್‌ನ ಖಾಸಗಿ ಫೋನ್‌ನಿಂದ ಸೌದಿ ಅರೇಬಿಯಾ ಹ್ಯಾಕ್ ಮಾಡಿದೆ ಎನ್ನುವುದು ಜೆಫ್ ನೇಮಿಸಿರುವ ಖಾಸಗಿ ತನಿಖಾ ಸಂಸ್ಥೆಯ ಅನುಮಾನ. 'ಜೆಫ್ ಒಡೆತನದ ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯ ಪತ್ರಕರ್ತ ಜಮಾಲ್ ಖಷೋಗಿ ಸೌದಿಯಲ್ಲಿ ಕೊಲೆಯಾದದ್ದರ ಬಗ್ಗೆ ಪತ್ರಿಕೆಯಲ್ಲಿ ವರದಿ ಬಂದಿತ್ತು. ಸೌದಿ ಸರಕಾರದ ಕೈವಾಡದ ಬಗ್ಗೆಯೂ ವಿವರಗಳು ಪ್ರಕಟವಾಗಿದ್ದವು. ಈ ಹಿನ್ನೆಲೆಯಲ್ಲಿ ಸೌದಿ ಅರೇಬಿಯಾ ಸರ್ಕಾರವೇ ಹ್ಯಾಕ್ ಮಾಡಿರುವ ಸಾಧ್ಯತೆ ಇದೆ' ಎನ್ನುವುದು ತನಿಖಾಸಂಸ್ಥೆಯ ವಾದ. ಸೌದಿ ಅರೇಬಿಯಾ ಇದನ್ನು ಬಲವಾಗಿ ಅಲ್ಲಗಳೆದಿದ್ದು, 'ಇದು ಸೌದಿ ದೊರೆಯ ವಿರುದ್ಧ ನಡೆದಿರುವ ಸಂಚು, ಸರ್ಕಾರದ ಹೆಸರು ಹಾಳುಗೆಡವಲು ಕೆಲವರು ಹೊರಟಿದ್ದಾರೆ' ಎಂದು ಬಣ್ಣಿಸಿದೆ. ಎಎಮ್‌ಐ ಮಾಧ್ಯಮ ಗುಂಪು ಕೂಡಾ, 'ಜೆಫ್ ಮತ್ತು ಆತನ ಪ್ರಿಯತಮೆ ಸ್ಯಾಂಚೆಜ್ ನಡುವಣ ಚಿತ್ರ ಮತ್ತು ಮಾಹಿತಿಗಳ ಮೂಲ ಸ್ಯಾಂಚೆಜ್‌ನ ಸೋದರ' ಎಂದು ಪ್ರಕಟಿಸಿ ಸೌದಿ ವಿರುದ್ಧದ ಆರೋಪವನ್ನು ಅಲ್ಲಗಳೆದಿದೆ.

ವಿಶ್ವದ 'ನಂಬರ್ ಒನ್ ಶ್ರೀಮಂತ'ರ ಪಟ್ಟಿಯಲ್ಲಿ ಜೆಫ್ ಬಿಜೋಸ್ ಹೆಸರು ಇದ್ದಂತೆಯೇ, ವಿಶ್ವದ ಅತ್ಯಧಿಕ ತಾಪತ್ರಯಗಳ ಪಟ್ಟಿಯಲ್ಲೂ ಆತನೇ 'ನಂಬರ್ ಒನ್' ಎನ್ನಲಡ್ಡಿಯಿಲ್ಲ! ಈ ತಾಪತ್ರಯಗಳು ಕೂಡಾ ಸದ್ಯಕ್ಕೆ ಮುಗಿಯುವಂತೆ ಕಾಣುತ್ತಿಲ್ಲ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65